ಸಮಾಚಾರ ಸಣ್ಣದಲ್ಲ

ಸಿಜೆಪಿಗೆ ವಿದೇಶಿ ಹಣ: ಕೇಂದ್ರ ಸಚಿವ ಜಿತೇಂದ್ರ ಆರೋಪ

ದೆಹಲಿ: ಮತದಾರರ ಪಟ್ಟಿ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ವಿರುದ್ಧ ಪ್ರತಿಭಟನೆ ನಡೆಸಲೆಂದೇ ಕಾಕ್ರೋಚ್ ಜನತಾ ಪಾರ್ಟಿ(ಸಿಜೆಪಿ)ಗೆ ವಿದೇಶದಿಂದ ಹಣ ಬಂದಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಗಂಭೀರ ಆರೋಪ ಮಾಡಿದ್ದಾರೆ. 'ಸಿಜೆಪಿ' ಸಂಸ್ಥಾಪಕ ಅಭಿಜಿತ್ ದೀಪ್ಕೆಗೆ ಅಮೆರಿಕದಿಂದ ಹಣ ಬಂದಿದ್ದರೆ, ಸಹ-ಸಂಸ್ಥಾಪಕ ಅಶುತೋಷ್ ರಂಕಾಗೆ ಪಾಕಿಸ್ತಾನದ ರಾಜಕಾರಣಿಗಳಿಂದ ಹಣ ಸಂದಾಯವಾಗಿದೆ. ಪಾಕ್ ರಾಜಕಾರಣಿಗಳಿಂದ ಮಾತ್ರವಲ್ಲದೆ ರಂಕಾ ತಮ್ಮ ಸಂಪರ್ಕದ ಇತರೆ ವ್ಯಕ್ತಿಗಳಿಂದಲೂ ಹಣ ಪಡೆಯುತ್ತಿದ್ದಾರೆ ಎಂದು ಸಚಿವ ಸಿಂಗ್ ದೂರಿದ್ದಾರೆ. ಭಾರತ ವಿರೋಧಿ ಸಂಘಟನೆಗಳು, ವಿದೇಶಿ ಹಣ ಪಡೆಯುವ ಎನ್‌ಜಿಒಗಳು ಮತ್ತು ಕೆಲವು ಗುಂಪುಗಳು ಎಸ್‌ಐಆರ್ ವಿರುದ್ಧದ ಪ್ರತಿಭಟನೆಗೆ ಹಣ ಒದಗಿಸುತ್ತಿವೆ ಎಂದು ಸಚಿವರು ದೂರಿದ್ದಾರೆ. ಎಸ್‌ಐಆರ್ ವಿರೋಧಿ ಪ್ರತಿಭಟನೆಯಲ್ಲಿ ಭಾಗವಹಿಸಿರುವ ಮಹಿಳೆಯೊಬ್ಬರಿಗೆ ಆಪರೇಷನ್ ಸಿಂದೂರ್ ಸಂದರ್ಭದಲ್ಲೂ ಹಣದ ನೆರವು ಸಿಕ್ಕಿದೆ ಎಂದು ಸಚಿವರು ಆರೋಪಿಸಿದ್ದಾರೆ.

ಆಸ್ಟ್ರೇಲಿಯ, ಯುಕೆ ಪಿಎಂಗಳ ಜತೆ ಸಚಿವ ಜೈಶಂಕರ್ ಚರ್ಚೆ



ಆಂಟಿಗುವಾ: ಕೆರೇಬಿಯನ್ ದೇಶಗಳಾದ ಆಂಟಿಗುವಾ ಅಂಡ್ ಬಾರ್ಬುಡಾದ ಸೇಂಟ್ ಜಾನ್ಸ್ ನಗರದಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ದೇಶಗಳ ಸರಕಾರದ ಮುಖ್ಯಸ್ಥರ ಶೃಂಗಸಭೆಯಲ್ಲಿ ಭಾರತವನ್ನು ಪ್ರತಿನಿಧಿಸಿರುವ ವಿದೇಶಾಂಗ ಸಚಿವ ಜೈಶಂಕರ್ ಅವರು ಗುರುವಾರ ಬೆಳಗ್ಗೆ ಆಸ್ಟ್ರೇಲಿಯ ಮತ್ತು ಯುನೈಟೆಡ್ ಕಿಂಗ್ಡಂನ ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಆಸ್ಟ್ರೇಲಿಯ ಪ್ರಧಾನಿ ಆಂಥೋಣಿ ಅಲ್ಬನೀಸ್ ಅವರ ಜತೆಗಿನ ಮಾತುಕತೆ ವೇಳೆ ಭಾರತ ಮತ್ತು ಆಸ್ಟ್ರೇಲಿಯ ದೇಶಗಳ ನಡುವಿನ ಕಾರ್ಯತಂತ್ರ ಪಾಲುದಾರಿಕೆಯನ್ನು ಮತ್ತಷ್ಟು ಸದೃಢಗೊಳಿಸುವ ಬಗೆಗೆ ಚರ್ಚೆ ನಡೆಸಲಾಯಿತು ಎಂದು ಜೈಶಂಕರ್ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ. ಬಳಿಕ ಯುನೈಟೆಡ್ ಕಿಂಗ್ಡಂನ ಪ್ರಧಾನಿ ಆಂಡಿ ಬರ್ನ್‌ಹ್ಯಾಮ್ ಅವರ ಜತೆಗಿನ ಮಾತುಕತೆ ವೇಳೆ ಉಭಯ ದೇಶಗಳ ನಡುವಿನ ವಾಣಿಜ್ಯ ಸಂಬಂಧದ ಬಗ್ಗೆ ಚರ್ಚಿಸಲಾಯಿತು. 'ಕಾಂಪ್ರಹೆನ್ಸಿವ್ ಎಕನಾಮಿಕ್ ಅಂಡ್ ಟ್ರೇಡ್ ಅಗ್ರಿಮೆಂಟ್'(ಸಿಇಟಿಎ)ನ ಮತ್ತಷ್ಟು ಪ್ರಯೋಜನಗಳ ಕುರಿತೂ ಚರ್ಚಿಸಲಾಯಿತು ಎಂದು ಜೈಶಂಕರ್ ಹೇಳಿಕೊಂಡಿದ್ದಾರೆ.

ಬರ, ಕಬ್ಬು ಬೆಳೆಗಾರರ ಸಮಸ್ಯೆ, ನೀರಾವರಿ ಯೋಜನೆಗಳಿಗೆ ಅನುಮತಿಗೆ ಮನವಿ

ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿಗೆ ಕೇಂದ್ರ ಸರಕಾರದ ನೆರವು ಕೋರಿಕೆ

ರಾಜ್ಯದ ನೆರವಿಗೆ ಬನ್ನಿ, ಪಿಎಂಗೆ ಸಿಎಂ ಮನವಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದ ಬರ ಪರಿಸ್ಥಿತಿ, ಕಬ್ಬು ಬೆಳೆಗಾರರ ಸಂಕಷ್ಟ, ನೀರಾವರಿ ಯೋಜನೆಗಳ ಅನುಷ್ಠಾನ ಹಾಗೂ ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿ ಸೇರಿದಂತೆ ಹಲವು ಪ್ರಮುಖ ವಿಚಾರಗಳಲ್ಲಿ ಕೇಂದ್ರ ಸರಕಾರದ ಮಧ್ಯಪ್ರವೇಶ ಹಾಗೂ ರಾಜ್ಯಕ್ಕೆ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ಕೋರಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸುದೀರ್ಘ ಪತ್ರ ಬರೆದಿದ್ದಾರೆ.





ಕರ್ನಾಟಕಕ್ಕೆ ನ್ಯಾಯಯುತ ಪಾಲು ಮತ್ತು ಅಗತ್ಯ ಆರ್ಥಿಕ ನೆರವು ನೀಡುವಂತೆ ಮನವಿ ಮಾಡಿರುವ ಅವರು, ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಆರ್ಥಿಕ ಪ್ಯಾಕೇಜ್ ಘೋಷಿಸಬೇಕು ಎಂದು ಒತ್ತಾಯಿಸಿದ್ದಾರೆ. ಇದೇ ವೇಳೆ ಮೇಕೆದಾಟು, ಕಳಸಾ-ಬಂಡೂರಿ, ಮೇಲ್ದಂಡೆ ಭದ್ರಾ, ಮೇಲ್ದಂಡೆ ಕೃಷ್ಣಾ ಹಾಗೂ ಎತ್ತಿನಹೊಳೆ ಯೋಜನೆಗಳಿಗೆ ಅಗತ್ಯ ಅನುಮತಿ ಮತ್ತು ಅನುದಾನವನ್ನು ತ್ವರಿತವಾಗಿ ಒದಗಿಸುವಂತೆ ಕೋರಿದ್ದಾರೆ.

2026ರ ಮುಂಗಾರು ಮಳೆ ಕೊರತೆಯಿಂದ ರಾಜ್ಯದಲ್ಲಿ ಗಂಭೀರ ಬರ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ 70 ವರ್ಷಗಳಲ್ಲಿ ಇದು ಎರಡನೇ ಅತಿ ಕಡಿಮೆ ಮುಂಗಾರು ಮಳೆಯಾಗಿದ್ದು, ರಾಜ್ಯದ 240 ತಾಲೂಕುಗಳ ಪೈಕಿ 226 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. 31 ಜಿಲ್ಲೆಗಳ ಪೈಕಿ 30 ಜಿಲ್ಲೆಗಳಲ್ಲಿ ಮಳೆ ಕೊರತೆಯಾಗಿದೆ. 237 ತಾಲೂಕುಗಳಲ್ಲಿ ಸತತ ಮೂರು ಅಥವಾ ಅದಕ್ಕಿಂತ ಹೆಚ್ಚು ವಾರಗಳ ಕಾಲ ಒಣಹವೆ ಕಂಡುಬಂದಿದೆ. ಬರದಿಂದಾಗಿ 84.10 ಲಕ್ಷ ಹೆಕ್ಟೇರ್ ಬಿತ್ತನೆ ಗುರಿಗೆ ಪ್ರತಿಯಾಗಿ 72.13 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿದೆ. ಸುಮಾರು 11.97 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಸಾಧ್ಯವಾಗಿಲ್ಲ ಎಂದು ವಿವರಿಸಿದ್ದಾರೆ.

ಸರ್ವಪಕ್ಷ ನಿಯೋಗಕ್ಕೆ ಭೇಟಿಯ ಅವಕಾಶ ಕೋರಿಕೆ

ರಾಜ್ಯದ ಬರ ಪರಿಸ್ಥಿತಿ, ರೈತರ ಸಂಕಷ್ಟ ಹಾಗೂ ಕಬ್ಬು ಬೆಳೆ ವಿವಾದ ಕುರಿತು ಚರ್ಚಿಸಲು ಸರ್ವಪಕ್ಷ ನಿಯೋಗಕ್ಕೆ ಪ್ರಧಾನಿ ಅವರನ್ನು ಭೇಟಿಯಾಗಲು ಸಮಯ ನೀಡುವಂತೆ ಶಿವಕುಮಾರ್ ಮನವಿ ಮಾಡಿದ್ದಾರೆ. ಕರ್ನಾಟಕ ವಿಶೇಷ ಸವಲತ್ತುಗಳನ್ನು ಕೇಳುತ್ತಿಲ್ಲ. ರಾಜ್ಯಕ್ಕೆ ನ್ಯಾಯಯುತವಾಗಿ ದೊರೆಯಬೇಕಾದ ಪಾಲು, ಸಮಾನ ಪರಿಗಣನೆ ಮತ್ತು ಅಭಿವೃದ್ಧಿಗೆ ಅಗತ್ಯವಾದ ಬೆಂಬಲವನ್ನು ಮಾತ್ರ ಕೇಳುತ್ತಿದೆ ಎಂದು ಪತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ.

ರಾಜ್ಯದ 861 ಗ್ರಾಮಗಳಲ್ಲಿ 227 ಟ್ಯಾಂಕರ್‌ಗಳು ಮತ್ತು 720 ಬಾಡಿಗೆ ಕೊಳವೆಬಾವಿಗಳ ಮೂಲಕ ಕುಡಿಯುವ ನೀರು ಪೂರೈಸಲಾಗುತ್ತಿದೆ. ಮುಂದಿನ ತಿಂಗಳುಗಳಲ್ಲಿ 2,300ಕ್ಕೂ ಹೆಚ್ಚು ಗ್ರಾಮ ಪಂಚಾಯಿತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಸಾಧ್ಯತೆಯಿದೆ. ಆದ್ದರಿಂದ ಈ ಹಿಂದೆ 101 ಬರಪೀಡಿತ ತಾಲೂಕುಗಳಿಗೆ ತುರ್ತು ಪರಿಹಾರ ಕ್ರಮಗಳಿಗಾಗಿ 3,705.30 ಕೋಟಿ ಆರ್ಥಿಕ ನೆರವು ಕೋರಿ ಕೇಂದ್ರಕ್ಕೆ ಮನವಿ ಸಲ್ಲಿಸಲಾಗಿತ್ತು. ಹೆಚ್ಚುವರಿಯಾಗಿ ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಿರುವ ಹಿನ್ನೆಲೆಯಲ್ಲಿ ಕೇಂದ್ರದಿಂದ ಪರಿಹಾರ ಬಿಡುಗಡೆಗೆ ವೇಗ ನೀಡುವಂತೆ ಕೋರಲಾಗಿದೆ. ರಾಜ್ಯ ಸರಕಾರ ತನ್ನ ಸಂಪನ್ಮೂಲದಿಂದ ಪ್ರತಿ ರೈತರಿಗೆ 2,500 ತುರ್ತು ನೆರವು ನೀಡಿರುವುದನ್ನೂ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಬೆಂಗಳೂರಿಗೆ ವಿಶೇಷ ಆರ್ಥಿಕ ಪ್ಯಾಕೇಜ್: ಬೆಂಗಳೂರಿನ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಆರ್ಥಿಕ ಚಟುವಟಿಕೆಗಳಿಂದ ರಸ್ತೆ, ಸಾರ್ವಜನಿಕ ಸಾರಿಗೆ ಹಾಗೂ ನಾಗರಿಕ ಮೂಲಸೌಕರ್ಯಗಳ ಮೇಲೆ ಒತ್ತಡ ಹೆಚ್ಚಾಗಿದೆ. ಹೀಗಾಗಿ ನಗರದ ಅಭಿವೃದ್ಧಿಗೆ ವಿಶೇಷ ಆರ್ಥಿಕ ಪ್ಯಾಕೇಜ್ ನೀಡಬೇಕು ಎಂದು ಪ್ರಧಾನಿ ಅವರಿಗೆ ಮನವಿ ಮಾಡಲಾಗಿದೆ. ನಮ್ಮ ಮೆಟ್ರೊ ಪಿಂಕ್ ಲೈನ್ ಉದ್ಘಾಟನೆಗೆ ಪ್ರಧಾನಿ ಆಗಮಿಸುತ್ತಿರುವುದನ್ನು ಸ್ವಾಗತಿಸಿರುವ ಶಿವಕುರ್ಮಾ, ನಗರದಲ್ಲಿ ಸಂಚಾರ ದಟ್ಟಣೆ ನಿವಾರಣೆಗೆ ರಕ್ಷಣಾ ಇಲಾಖೆಯ ಜಮೀನುಗಳನ್ನು ಸೂಕ್ತ ದರದಲ್ಲಿ ರಾಜ್ಯಕ್ಕೆ ಒದಗಿಸುವಂತೆ ಕೋರಿದ್ದಾರೆ.

ರಾಜ್ಯದಲ್ಲಿ ಒಟ್ಟು 101.10 ಲಕ್ಷ ಗ್ರಾಮೀಣ ಕುಟುಂಬಗಳಿದ್ದು, ಜಲಜೀವನ್ ಮಿಷನ್ ಆರಂಭದ ಸಂದರ್ಭದಲ್ಲಿ 24.51 ಲಕ್ಷ ಕುಟುಂಬಗಳಿಗೆ ಮಾತ್ರ ನಳ ಸಂಪರ್ಕವಿತ್ತು. 2026ರ ಸೆಪ್ಟೆಂಬರ್ ವೇಳೆಗೆ 90.61 ಲಕ್ಷ ಮನೆಗಳಿಗೆ ಕಾರ್ಯನಿರ್ವಹಿಸುವ ನಳ ಸಂಪರ್ಕ ಕಲ್ಪಿಸಲಾಗಿದೆ. ಇದು ಶೇ.89.52ರಷ್ಟು ಪ್ರಗತಿಯಾಗಿದೆ. ನೀರಿನ ಅಭಾವ ಎದುರಿಸುತ್ತಿರುವ ಪ್ರದೇಶಗಳಿಗೆ 160 ಹೊಸ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ರೂಪಿಸಲಾಗಿದೆ. ಇವುಗಳಿಗೆ ಬಾಕಿ ಇರುವ ಅನುದಾನವನ್ನು ತ್ವರಿತವಾಗಿ ಬಿಡುಗಡೆ ಮಾಡುವಂತೆ ಮನವಿ ಮಾಡಲಾಗಿದೆ.

ಕಬ್ಬಿಗರ ಪರ ಮೊರೆ

ರಾಜ್ಯದಲ್ಲಿ ಕಬ್ಬು ಬೆಳೆಗಾರರ ಪ್ರತಿಭಟನೆ ಮತ್ತು ಕಬ್ಬು ಅರೆಯುವ ಹಂಗಾಮು ವಿಳಂಬವಾಗಿರುವ ವಿಚಾರವನ್ನೂ ಪ್ರಧಾನಿ ಗಮನಕ್ಕೆ ತರಲಾಗಿದೆ. ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸಲು ಕೇಂದ್ರ ಸರಕಾರ ಐದು ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಲಾಗಿದೆ. ಪ್ರಮುಖವಾಗಿ 2019ರಿಂದ ಕೆ.ಜಿ.ಗೆ 31ರಷ್ಟೇ ಇರುವ ಸಕ್ಕರೆಯ ಕನಿಷ್ಠ ಮಾರಾಟ ಬೆಲೆಯನ್ನು ಹೆಚ್ಚಿಸಬೇಕು. ದೇಶೀಯ ಬಳಕೆ ಮತ್ತು ವಾಣಿಜ್ಯ ಬಳಕೆಯ ಸಕ್ಕರೆಗೆ ಪ್ರತ್ಯೇಕ ಕನಿಷ್ಠ ಮಾರಾಟ ಬೆಲೆ ನಿಗದಿಪಡಿಸಬೇಕು. ಕಬ್ಬಿನ ರಸ, ಸಿರಪ್ ಮತ್ತು ಬಿ-ಹೆವಿ ಮೊಲಾಸಿಸ್ನಿಂದ ಎಥೆನಾಲ್ ಉತ್ಪಾದನೆಗೆ ವಿಧಿಸಿರುವ ನಿರ್ಬಂಧಗಳನ್ನು ಮರುಪರಿಶೀಲಿಸಬೇಕು. ಕಬ್ಬು ಆಧಾರಿತ ಎಥೆನಾಲ್ ಬೆಲೆಯನ್ನು ಹೆಚ್ಚಿಸಬೇಕು. ಕಬ್ಬಿನ ನ್ಯಾಯಯುತ ಮತ್ತು ಲಾಭದಾಯಕ ಬೆಲೆ ನಿಗದಿಯಲ್ಲಿನ ಮೂಲ ಸಕ್ಕರೆ ಇಳುವರಿ ಪ್ರಮಾಣವನ್ನು ಶೇ.10.25ರಿಂದ ಶೇ.9.5ಕ್ಕೆ ಇಳಿಸಬೇಕು ಎಂದು ಪ್ರಸ್ತಾಪಿಸಿದ್ದಾರೆ.

ಬೆಳಗಾವಿಯಲ್ಲಿ 6ನೇ ರಾಜ್ಯ ಪತ್ರಿಕಾ ವಿತರಕರ ಸಮ್ಮೇಳನ

2026ನೇ ಸಾಲಿನ ಪ್ರಶಸ್ತಿ ಪುರಸ್ಕೃತರ ಪಟ್ಟಿ ಬಿಡುಗಡೆ

ಬೆಳಗಾವಿ: ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ, ದಿನಪತ್ರಿಕೆ ಡಿಸ್ಟ್ರಿಬ್ಯೂಟರ್ ಚಾರಿಟಬಲ್ ಟ್ರಸ್ಟ್ ಹಾಗೂ ಬೆಳಗಾವಿ ದಿನಪತ್ರಿಕೆ ವಿತರಕರ ಸಂಘದ ಸಹಯೋಗದಲ್ಲಿ ದಿನಾಂಕ ನವೆಂಬರ್ 11 ರಂದು ಬೆಳಗಾವಿಯ ಅಶೋಕನಗರ ದಲ್ಲಿರುವ ಧರ್ಮರಾಮ್ ಭವನ್‌ದಲ್ಲಿ ನಡೆಯಲಿರುವ 6ನೇ ರಾಜ್ಯ ಪತ್ರಿಕಾ ವಿತರಕರ ಸಮ್ಮೇಳನದ ಪ್ರತಿಭಾ ಪುರಸ್ಕಾರ, ಮಾಧ್ಯಮ ಸೇವಾ ರತ್ನ ಪ್ರಶಸ್ತಿ ಹಾಗೂ ಪತ್ರಿಕಾ ವಿತರಕರ ಸೇವಾ ರತ್ನ ಪ್ರಶಸ್ತಿಯ ಪುರಸ್ಕೃತರ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ.

ಪತ್ರಿಕಾ ವಿತರಕರ ಸೇವಾ ರತ್ನ ಪ್ರಶಸ್ತಿ-2026

1. ಅಥಣಿ-ರಾಜು ಗಾಳಿ
2. ಬೈಲಹೊಂಗಲ-ಯಾಸಿನ್ ಕಿತ್ತೂರು
3. ಸಂಜಯ್ ಕದಂ
4. ಚಿಕ್ಕೋಡಿ-ಮಾಳಿ
5. ಗೋಕಾಕ್-ವೀರೇಂದ್ರ ಕಿತ್ತೂರು
6. ಹುಕ್ಕೇರಿ/ಹತ್ತರಗಿ-ಪ್ರಭು ಖೋತ್
7. ಖಾನಾಪುರ/ನಂದಗಡ-ಕಿರಣ್ ಬಿಡಕರ್
8. ರಾಯಬಾಗ-ಶಿವಾಜಿ ಮೇತ್ರಿ
9. ರಾಮದುರ್ಗ-ಪ್ರಕಾಶ್ ಅಸುಂಡಿ
10. ಸವದತ್ತಿ-ಬಾಳೋಜಿ (ನೂರ್)
11. ಕಿತ್ತೂರು-ನಾಗರಾಜ್ ಜೋಲಾಪುರ
12. ನಿಪ್ಪಾಣಿ-ಉದಯ್ ದೇಸಾಯಿ
13. ಕಾಗವಾಡ-ಗುಂಡು ಪಾಟೀಲ್ (ಸೋನೋಲಿ)
14. ಮೂಡಲಗಿ-ಕೃಷ್ಣಪ್ಪ ಗಿರೆಣ್ಣವರ್
15. ಯರಗಟ್ಟಿ-ವಿರಕ್ತಿಮಠ
16. ಬೆಳಗಾವಿ-ರಾಜು ಮುಚ್ಚಂಡಿ
17. ಬೆಳಗಾವಿ-ನಾಗೇಶ್ ಕುಲಕರ್ಣಿ
18. ಬೆಳಗಾವಿ-ಸುಭಾಷ್ ಪಾಟೀಲ್
19. ಬೆಳಗಾವಿ-ಸುಧೀರ್ ಕುಲಕರ್ಣಿ
20. ಬೆಳಗಾವಿ-ಬಾಳು ಮಾಯಣ್ಣಾಚೆ (ವಿಕಲಚೇತನರು)
21. ಬೆಳಗಾವಿ-ಜಗನ್ನಾಥ್ ಮಾಂಜ್ರೇಕರ್
22. ಬೆಳಗಾವಿ-ಅಶೋಕ್ ಶಿಂದೆ
23. ಬೆಳಗಾವಿ-ಪ್ರಫುಲ್ ಕುಡಲೆ
24. ಬೆಳಗಾವಿ-ದೀಪಕ್ ಘೋರ್ಪಡೆ
25. ಬೆಳಗಾವಿ -ಸೌ.ಸರೋದೆ (ಮಹಿಳೆ)

ಪತ್ರಿಕೆ ಹಂಚುವ ಹುಡುಗರಿಗೆ ಗೌರವ

1. ವಿಶ್ವನಾಥ್ ಪಾಟೀಲ್
2. ಪ್ರಭಾಕರ್ ಹುಲಿ
3. ಚಂದ್ರಕಾಂತ್ ಮುತಗೇಕರ್
4. ಆದಿತ್ಯ ಮಾಯೇಂಕರ್

14\. ಓಂಕಾರ್

ಮಾಧ್ಯಮ ಸೇವಾ ರತ್ನ ಪ್ರಶಸ್ತಿ-2026

1. ವಿಜಯ ಕರ್ನಾಟಕ-ಸುರೇಶ್ ಶಾನಭಾಗ್
2. ವಿಜಯವಾಣಿ-ಮಹೇಶ್ ವಿಜಾಪುರೆ
3. ಪ್ರಜಾವಾಣಿ/ಡೆಕ್ಕನ್ ಹೆರಾಲ್ಡ್ - ಸಂತೋಷ್ ಚಿಕ್ಕೋಡಿ
4. ಸಂಯುಕ್ತ ಕರ್ನಾಟಕ-ರಾಮಚಂದ್ರ ಕುಲಕರ್ಣಿ
5. ಕನ್ನಡಪ್ರಭ-ಬ್ರಹ್ಮಾನಂದ ನಾಗಪ್ಪ/ ಮಂಜುನಾಥ್ ಕೊಸನಲಾಳ
6. ಹೊಸದಿಗಂತ-ಸಂದೀಪ್ ಮಾಲಿಮನಿ
7. ಲೋಕದರ್ಶನ-ವೈಭವ್ ಕುಬ್ಬದ
8. ಉದಯವಾಣಿ-ಮಾರುತಿ ಕೂಳೇಕರ್
9. ವಿಶ್ವವಾಣಿ-ರವಿ ಪೂಜಾರ್
10. ದಿ ಹಿಂದೂ-ಮಂಜುನಾಥ್ ಕೊಸಗಿ
11. ಇಂಡಿಯನ್ ಎಕ್ಸ್‌ಪ್ರೆಸ್-ಅಪ್ಪಣ್ಣ ಮೇತ್ರಿ
12. ತರುಣ ಭಾರತ-ಕಿರಣ್ ಠಾಕೂರ್
13. ಸಕಾಳ್-ಮಲ್ಲಿಕಾರ್ಜುನ್ ಮೊಗಲಿ, ಬೆಳಗಾವಿ ಕಚೇರಿ ಪ್ರಭಾರಿ
14. ಪುಢಾರಿ-ಗೋಪಾಲ್ ಗೌಡ, ಬೆಳಗಾವಿ ಕಚೇರಿ ಪ್ರಭಾರಿ
15. ಅಣ್ಣಪ್ಪ ಮೈತ್ರಿ-ಇಂಡಿಯನ್ ಎಕ್ಸ್‌ಪ್ರೆಸ್

6ರಿಂದ ಮಾದಪ್ಪನ ಬೆಟ್ಟದಲ್ಲಿ ಜಾತ್ರೆ

ಚಾಮರಾಜನಗರ: ಮಲೆ ಮಹದೇಶ್ವರ ಬೆಟ್ಟದಲ್ಲಿ ದೀಪಾವಳಿ ಜಾತ್ರೆ ಹಿನ್ನೆಲೆಯಲ್ಲಿ ನ.6ರಿಂದ 10ರವರೆಗೆ ದ್ವಿಚಕ್ರ, ತ್ರಿಚಕ್ರ ವಾಹನಗಳಿಗೆ ನಿರ್ಬಂಧ ವಿಧಿಸಲಾಗಿದೆ. ನ.6 ರಿಂದ 10 ರವರೆಗೂ ದ್ವಿಚಕ್ರ, ತ್ರಿಚಕ್ರ ವಾಹನಗಳಿಗೆ ನಿರ್ಬಂಧ ಹೇರಲಾಗಿದೆ. ದ್ವಿಚಕ್ರ ಹಾಗೂ ತ್ರಿಚಕ್ರ ವಾಹನಗಳಿಗೆ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಕೌದಳ್ಳಿ ಬಳಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ.

ಆರ್‌ಟಿಒ ಕಚೇರಿಗಳ ಮೇಲೆ ಲೋಕಾಯುಕ್ತ ದಾಳಿ



ಮೈಸೂರು: ಸಾರಿಗೆ ಇಲಾಖೆಯಲ್ಲಿನ ಅಕ್ರಮ ಚಟುವಟಿಕೆಗಳ ಶಂಕೆ ಹಿನ್ನೆಲೆಯಲ್ಲಿ ಮೈಸೂರಿನ ಎರಡು ಪ್ರಾದೇಶಿಕ ಸಾರಿಗೆ ಕಚೇರಿಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ಗುರುವಾರ ಏಕಕಾಲದಲ್ಲಿ ದಾಳಿ ನಡೆಸಿ ತೀವ್ರ ತಪಾಸಣೆ ಕೈಗೊಂಡರು.

ನಗರದ ಚಾಮರಾಜಪುರಂನಲ್ಲಿರುವ ಆರ್‌ಟಿಒ ಪಶ್ಚಿಮ ಕಚೇರಿ (ಕೆಎ-09) ಹಾಗೂ ರಾಜೀವ್‌ನಗರದ ಆರ್‌ಟಿಒ ಪೂರ್ವ ಕಚೇರಿ (ಕೆಎ- 55)ಗಳಲ್ಲಿ ಈ ಕಾರ್ಯಾಚರಣೆ ನಡೆಯಿತು. ಒಟ್ಟು 30 ಅಧಿಕಾರಿಗಳು ಆರು ಪ್ರತ್ಯೇಕ ತಂಡಗಳಾಗಿ ವಿಭಜನೆಗೊಂಡು ಎರಡೂ ಕಚೇರಿಗಳಲ್ಲಿ ಶೋಧ ನಡೆಸಿದರು.

ದಾಳಿಯ ವೇಳೆ ಕಚೇರಿಗಳ ಮುಖ್ಯ ದ್ವಾರಗಳನ್ನು ಬಂದ್ ಮಾಡಿದ ಅಧಿಕಾರಿಗಳು, ಆವರಣದಲ್ಲಿದ್ದ ಮಧ್ಯವರ್ತಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು. ಕೆಲವರು ಅಧಿಕಾರಿಗಳ ಕೈಗೆ ಸಿಕ್ಕಿಬಿದ್ದರೆ, ದಾಳಿಯ ಸುಳಿವು ಅರಿತ ಕೆಲವು ಮಧ್ಯವರ್ತಿಗಳು ತಮ್ಮ ವಸ್ತುಗಳನ್ನು ಬಿಟ್ಟು ಸ್ಥಳದಿಂದ ಪರಾರಿಯಾದರು.

ಕಚೇರಿಗಳಲ್ಲಿ ನಡೆಯುತ್ತಿದ್ದ ಕಡತಗಳ ವಿಲೇವಾರಿ, ಸಾರ್ವಜನಿಕ ಸೇವೆಗಳ ಕಾರ್ಯವೈಖರಿ ಹಾಗೂ ಇತರ ಚಟುವಟಿಕೆಗಳ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಆರ್‌ಟಿಒ ಸಿಬ್ಬಂದಿಯನ್ನೂ ಸುದೀರ್ಘವಾಗಿ ವಿಚಾರಣೆಗೊಳಪಡಿಸಿದರು.

ಲೋಕಾಯುಕ್ತರ ಕಾರ್ಯಾಚರಣೆಯ ನಡುವೆಯೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ಎಲ್‌ಎಲ್‌ಆರ್, ಚಾಲನಾ ಪರವಾನಗಿ ಹಾಗೂ ವಾಹನಗಳ ಫಿಟ್‌ನೆಸ್ ಪ್ರಮಾಣಪತ್ರ ಸೇರಿದಂತೆ ವಿವಿಧ ಸೇವೆಗಳ ವಿತರಣೆಯನ್ನು ಎಂದಿನಂತೆ ಮುಂದುವರಿಸಲಾಗಿತ್ತು.

ಕಚೇರಿಗೆ ಆಗಮಿಸುತ್ತಿದ್ದ ಸಾರ್ವಜನಿಕರನ್ನು ಪ್ರವೇಶದ್ವಾರದಲ್ಲೇ ತಡೆದು, ಅವರ ಭೇಟಿಯ ಉದ್ದೇಶವನ್ನು ವಿಚಾರಿಸಿದ ಬಳಿಕ ಒಳಪ್ರವೇಶಕ್ಕೆ ಅವಕಾಶ ನೀಡಲಾಗುತ್ತಿತ್ತು. ಸಾರಿಗೆ ಕಚೇರಿಗಳಲ್ಲಿ ಮಧ್ಯವರ್ತಿಗಳ ಹಾವಳಿ ಹಾಗೂ ಅಕ್ರಮಗಳಿಗೆ ಸಂಬಂಧಿಸಿದಂತೆ ಲೋಕಾಯುಕ್ತರು ಕೈಗೊಂಡಿರುವ ಈ ದಾಳಿ ಮಹತ್ವ ಪಡೆದುಕೊಂಡಿದೆ.

ಯಶವಂತಪುರ- ಮಡಗಾಂವ್‌ಗೆ ವಿಶೇಷ ರೈಲು

ಬೆಂಗಳೂರು: ಯಶವಂತಪುರ- ಮಡಗಾಂವ್ ಹಾಗೂ ಮಡಗಾಂವ್-ಬೆಂಗಳೂರು ಕಂಟೋನ್ಮೆಂಟ್ ನಡುವೆ ವಿಶೇಷ ರೈಲು ಸಂಚರಿಸಲಿದೆ ಎಂದು ನೈಋತ್ಯ ರೈಲ್ವೆ ಪ್ರಕಟಣೆಯಲ್ಲಿ ತಿಳಿಸಿದೆ.

ಹಬ್ಬದ ಪ್ರಯುಕ್ತ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ನಿಯಂತ್ರಿಸಲು ಯಶವಂತಪುರ-ಮಡಗಾಂವ್ ಮತ್ತು ಮಡಗಾಂವ್ -ಬೆಂಗಳೂರು ಕಂಟೋನ್ಮೆಂಟ್ ನಡುವೆ ವಿಶೇಷ ರೈಲು ಸೇವೆಯನ್ನು ಒದಗಿಸಿದೆ. ನ.6ರಂದು ರಾತ್ರಿ 11:55ಕ್ಕೆ ಯಶವಂತಪುರದಿಂದ ಹೊರಟು, ಮರುದಿನ ಸಂಜೆ 6:10ಕ್ಕೆ ಮಡಗಾಂವ್ ತಲುಪಲಿದೆ. ಮರುಪ್ರಯಾಣದ ರೈಲು ಸಂಖ್ಯೆ 06592 (ಮಡಗಾಂವ್-ಬೆಂಗಳೂರು ಕಂಟೋನ್ಮೆಂಟ್) ನವೆಂಬರ್ 8 ಭಾನುವಾರದಂದು ಬೆ.11 ಗಂಟೆಗೆ ಮಡಗಾಂವ್‌ನಿಂದ ಹೊರಟು, ನವೆಂಬರ್ 9ರಂದು ಬೆಳಗಿನ ಜಾವ 5:20ಕ್ಕೆ ಬೆಂಗಳೂರು ಕಂಟೋನ್ಮೆಂಟ್ ತಲುಪಲಿದೆ. ಈ ರೈಲುಗಳು ಮಾರ್ಗದ ಮಧ್ಯೆ ಹಾಸನ, ಮಂಗಳೂರು ಜಂಕ್ಷನ್, ಉಡುಪಿ, ಕುಂದಾಪುರ, ಭಟ್ಕಳ ಹಾಗೂ ಕಾರವಾರ ಸೇರಿದಂತೆ ಒಟ್ಟು 22 ನಿಲ್ದಾಣಗಳಲ್ಲಿ ನಿಲುಗಡೆ ಹೊಂದಲಿವೆ. ಹಿಂತಿರುಗುವ ವೇಳೆಯ ರೈಲು ಎಸ್‌ಎಂವಿಟಿ ಬೆಂಗಳೂರು ನಿಲ್ದಾಣದಲ್ಲಿ ನಿಲ್ಲಲಿದೆ.

ಟೀಸರ್‌ನಲ್ಲಿ ಲಾರ್ಡ್ ಗಾಗನ ಸದ್ದು





ಕನ್ನಡದಲ್ಲಿ ವಿಭಿನ್ನ ಕಥೆಯ ಜತೆಗೆ ವಿಭಿನ್ನ ಶೀರ್ಷಿಕೆಯ ಸಿನಿಮಾಗಳು ತೆರೆಗೆ ಬರುತ್ತಿವೆ. ಅಂತಹ ಸಿನಿಮಾಗಳಲ್ಲಿ ಲಾರ್ಡ್ ಗಾಗ ಸಿನಿಮಾವೂ ಒಂದು. ಗಾಗ ಟೈಟಲ್ ಜತೆಗೆ ಕಂಟೆಂಟ್ ಮತ್ತು ಸಬ್ಜೆಕ್ಟ್ ಮೂಲಕವೂ ಗಮನ ಸೆಳೆಯುತ್ತಿದೆ. ಈಗಾಗಲೇ ಸದ್ದಿಲ್ಲದೆ ಬಹುತೇಕ ಚಿತ್ರೀಕರಣ ಪೂರ್ಣಗೊಳಿಸಿರುವ ಲಾರ್ಡ್ ಗಾಗ ಚಿತ್ರತಂಡ, ಟೀಸರ್ ಅನ್ನು ಬಿಡುಗಡೆ ಮಾಡಿದೆ. ಲಾರ್ಡ್ ಗಾಗ ಚಿತ್ರಕ್ಕೆ ವೈಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಝೀರೋ ಗ್ರ್ಯಾವಿಟಿ ಫಿಲಂಸ್ ಬ್ಯಾನರಿನಲ್ಲಿ ಲಾರ್ಡ್ ಗಾಗ ನಿರ್ಮಾಣವಾಗುತ್ತಿದ್ದು, ಮುಕಿ ರಘುನಾಥನ್ ಬಂಡವಾಳ ಹೂಡಿದ್ದಾರೆ.

ಲಾರ್ಡ್ ಗಾಗ ಔಟ್ ಅಂಡ್ ಔಟ್ ಕಲ್ಟ್ ಸಿನಿಮಾ ಎನ್ನುವುದು ಟೀಸರ್‌ನಲ್ಲಿ ತಿಳಿಯುತ್ತದೆ. ಮನುಷ್ಯನ ಮನಸ್ಸಿನಲ್ಲಿ ಮೂಡುವ ಪ್ರೀತಿ, ಪ್ರೇಮ, ಪ್ರಣಯ, ಭಾವನೆ, ವ್ಯಸನ, ಆಯ್ಕೆ ಎಲ್ಲದರ ಚಿತ್ರಣ ಈ ಸಿನಿಮಾದ ಕಥೆಯಲ್ಲಿ ಬೆರೆತಿದೆ. ಅದನ್ನು ರೊಮ್ಯಾಂಟಿಕ್ ಸೈಕಾಲಜಿಕಲ್ ಥ್ರಿಲ್ಲರ್ ಶೈಲಿಯಲ್ಲಿ ತೆರೆಗೆ ತರಲಾಗುತ್ತಿದೆ. ಚಿತ್ರದ ಮೊದಲ ಟೀಸರ್ ಕಲ್ಟ್ ಶೈಲಿಯಲ್ಲಿ ಮೂಡಿಬಂದಿದ್ದು, ಹೊಸ ಸಿನಿಪ್ರಿಯರನ್ನು ಸೆಳೆಯುತ್ತಿದೆ.

ಲಾರ್ಡ್ ಗಾಗ ಚಿತ್ರದಲ್ಲಿ ಶೂನ್ಯ ನಾಯಕ ನಟನಾಗಿ ಅಭಿನಯಿಸಿದ್ದು, ಸ್ವರೂಪಿಣಿ ಮತ್ತು ದಿಶಾ ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ. ನಿರ್ಮಾಪಕ ರಘುನಾಥನ್ ಕೂಡ ಪಾತ್ರವೊಂದರಲ್ಲಿ ಅಭಿನಯಿಸಿದ್ದಾರೆ. ಲಾರ್ಡ್ ಗಾಗ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಕನ್ನಡದ ಜತೆಗೆ ತಮಿಳು, ತೆಲುಗು, ಮಲೆಯಾಳಂ, ಹಿಂದಿ, ಬೆಂಗಾಲಿ, ಭೋಜಪುರಿ ಸೇರಿದಂತೆ ಏಳಕ್ಕೂ ಹೆಚ್ಚು ಭಾಷೆಗಳಲ್ಲಿ ತೆರೆಗೆ ಬರಲಿದೆ. ಸದ್ಯ ಚಿತ್ರದ ಟೀಸರ್ ಮೂಲಕ ಸದ್ದು ಮಾಡುತ್ತಿರುವ ಲಾರ್ಡ್ ಗಾಗನ ಹಾಡುಗಳು ಮತ್ತು ಟ್ರೇಲರ್ ಶೀಘ್ರದಲ್ಲಿಯೇ ಬಿಡುಗಡೆಯಾಗಲಿದೆ.

ಎಕ್ಯುಐ 482: ಅತಿ ಕಳಪೆ ಮಟ್ಟಕ್ಕೆ ಕುಸಿದ ದೆಹಲಿ ಹವೆ



ದೆಹಲಿ: ದೇಶದ ರಾಜಧಾನಿ ನಗರ ದೆಹಲಿಯಲ್ಲಿ ವಾಯು ಮಾಲಿನ್ಯ ಪ್ರಮಾಣ ಅತಿ ಅಪಾಯಕಾರಿ ಮಟ್ಟಕ್ಕೆ ತಲುಪಿದೆ. ಗುರುವಾರ ಬೆಳಗ್ಗೆ 'ವಾಯು ಗುಣಮಟ್ಟ ಸೂಚಿ'(ಎಕ್ಯುಐ) 482ಕ್ಕೆ ಕುಸಿದಿದೆ. ಪರಿಣಾಮ ದೆಹಲಿಯ ಹವಾಗುಣ 'ಅತಿ ಗಂಭೀರ' ಮತ್ತು 'ಅಪಾಯಕಾರಿ' ಮಾಲಿನ್ಯ ವಲಯಕ್ಕೆ ಸೇರಿದಂತಾಗಿದೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಕಟಿಸಿದೆ.

ಮಂಡಳಿಯ ಅಂಕಿ ಅಂಶ ಪ್ರಕಾರ, ನಗರದ ಏಳೂ ವಾಯು ಗುಣಮಟ್ಟ ಮೇಲ್ವಿಚಾರಣಾ ಕೇಂದ್ರಗಳಲ್ಲಿ ಎಕ್ಯುಐ ಪ್ರಮಾಣ ಸರಾಸರಿ 400ಕ್ಕಿಂತ ಹೆಚ್ಚಾಗಿದೆ ಎಂದು ತಿಳಿದುಬಂದಿದೆ. ಇದು ಗಂಭೀರ ವಾಯುಮಾಲಿನ್ಯ ಸೂಚಕವಾಗಿದೆ. ಪಂಜಾಬಿ ಬಾಗ್‌ನಲ್ಲಿ ಗರಿಷ್ಠ 446 ಎಕ್ಯುಐ ದಾಖಲಾಗಿದೆ. ನಂತರದ ಸ್ಥಾನಗಳಲ್ಲಿ ನರೇಲಾ(434), ರೋಹಿಣಿ (431), ಆರ್.ಕೆ. ಪುರಂ (416), ಬವಾನಾ (412), ದೆಹಲಿ ವಿವಿ ಉತ್ತರ ಕ್ಯಾಂಪಸ್(408) ಹಾಗೂ ಪಟ್ಪರ್‌ಗಂಜ್ (405) ಇವೆ.

ದೆಹಲಿ ನಗರದ ಹಲವು ಪ್ರದೇಶಗಳಲ್ಲಿ ವಾಯು ಗುಣಮಟ್ಟ 'ಅತ್ಯಂತ ಕಳಪೆ' ಶ್ರೇಣಿಯಲ್ಲೇ ಮುಂದುವರಿದಿದೆ. ಓಖ್ಲಾ ಫೇಸ್-2 ಮತ್ತು ಇಂಡಿಯ ಗೇಟ್‌ನಲ್ಲಿ 399, ಐಟಿಒದಲ್ಲಿ 397 ಹಾಗೂ ದ್ವಾರಕಾ ಸೆಕ್ಟರ್-8ರಲ್ಲಿ 396, ಚಾಂದನಿ ಚೌಕ್‌ನಲ್ಲಿ 356, ವಸುಂಧರಾ ಎನ್‌ಕ್ಲೇವ್‌ನಲ್ಲಿ 330 ಎಕ್ಯುಐ ದಾಖಲಾಗಿದೆ. ಕೃಷಿ ತ್ಯಾಜ್ಯ ಸುಡುವಿಕೆಯಿಂದ ಶೇ.16.28 ಮತ್ತು ಸಾರಿಗೆ ವಲಯದಿಂದ ಶೇ.18.17ರಷ್ಟು ವಾಯು ಮಾಲಿನ್ಯ ಉಂಟಾಗಿದೆ. ಉಪಗ್ರಹದ ದತ್ತಾಂಶ ಪ್ರಕಾರ, ನ.4ರಂದು 6 ರಾಜ್ಯಗಳಲ್ಲಿ ಒಟ್ಟು 467 ಕೃಷಿ ಬೆಂಕಿ ಘಟನೆಗಳಾಗಿವೆ. ಮಧ್ಯಪ್ರದೇಶದಲ್ಲಿ 157, ಪಂಜಾಬ್‌ನಲ್ಲಿ 151, ರಾಜಸ್ಥಾನದಲ್ಲಿ 111, ಉತ್ತರ ಪ್ರದೇಶದಲ್ಲಿ 33, ಹರಿಯಾಣದಲ್ಲಿ 10 ಹಾಗೂ ಉತ್ತರಾಖಂಡದಲ್ಲಿ ಐದು ತ್ಯಾಜ್ಯಕ್ಕೆ ಬೆಂಕಿ ಘಟನೆ ನಡೆದಿವೆ. ಸೆ.15ರಿಂದ ನ.4ರವರೆಗೆ ದೆಹಲಿ ಮತ್ತು ಸುತ್ತಲ 7 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು 4,800 ಕಡೆ ಕೃಷಿತ್ಯಾಜ್ಯಕ್ಕೆ ಬೆಂಕಿ ಹಾಕಲಾಗಿದೆ.



ಬಾರ್‌ನಲ್ಲಿ ಕಮಾಲ್ ಮಾಡಲು ರೆಡಿಯಾದ ಕೋಮಲ್



ನಟ ಕೋಮಲ್ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ, ಈ ನಡುವೆ ಬಾರ್‌ನಲ್ಲಿಯೂ ಪ್ರತ್ಯಕ್ಷವಾಗಿದ್ದಾರೆ. ಹಾಗಂತ ಅಚ್ಚರಿಯಾಗಬೇಡಿ. ಕೋಮಲ್ ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದು, ಮತ್ತೊಮ್ಮೆ ಕಾಮಿಡಿ ಕಮಾಲ್ ಮಾಡಲು ರೆಡಿಯಾಗಿದ್ದಾರೆ. ಇದೀಗ 60 ಎಂ.ಎಲ್ ಹೆಸರಿನಲ್ಲಿ ಚಿತ್ರದ ಟೀಸರ್ ಬಿಡುಗಡೆಯಾಗಿದೆ. ಹಿರಿಯ ನಟ ಜಗ್ಗೇಶ್, ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್‌ನ ಟೀಸರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ಚಿತ್ರದಲ್ಲಿ ಭರಪೂರ ಕಾಮಿಡಿ ಬೆರೆತಿರುವುದು ಟೀಸರ್‌ನಲ್ಲಿ ತಿಳಿಯುತ್ತದೆ.

ನಿರ್ದೇಶಕ ಸಂದೇಶ್ ಶೆಟ್ಟಿ ಮತ್ತು ಅವರ ತಂಡ ಸಾಕಷ್ಟು ಪರಿಶ್ರಮ ಹಾಕಿ ಸಿನಿಮಾ ಮಾಡಿರುವುದು ಪ್ರತಿ ಫ್ರೇಮ್‌ನಲ್ಲಿಯೂ ಕಾಣುತ್ತದೆ. ಒಂದು ಚಿತ್ರದ ಕಥಾವಸ್ತು ಬಗ್ಗೆ ಚರ್ಚೆಗಳು ಆಗುವುದು ಒಳ್ಳೆಯದು ಎಂದು ಜಗ್ಗೇಶ್ ಹೇಳಿದರು. ಚಿತ್ರದ ಟೀಸರ್‌ನಲ್ಲಿ ಲವ್ ಜಿಹಾದ್, ಮತಾಂತರ, ದೇವಸ್ಥಾನಗಳ ಮೇಲಿನ ದಾಳಿ, ಹಿಂದೂ, ಮುಸ್ಲಿಂ ಧಾರ್ಮಿಕ ವಿಷಯಗಳು ಹೈಲೈಟ್ಸ್ ಆಗಿದ್ದು, ಸಿನಿಮಾದ ಟೈಟಲ್‌ಗೂ ಟೀಸರ್‌ನಲ್ಲಿ ಹೇಳುತ್ತಿರುವ ವಿಷಯಕ್ಕೂ ಎತ್ತಣಿಂದೆತ್ತ ಸಂಬಂಧ ಎನ್ನುವ ಪ್ರಶ್ನೆಯೂ ಕಾಡುತ್ತದೆ.

ಈ ಚಿತ್ರದಲ್ಲಿ ನಟ ಕೋಮಲ್ ಆಸ್ಥಾನದ ವರ್ಣಚಿತ್ರ ಕಲಾವಿದನಾಗಿ, ನಟಿ ಮೇಘನಾ ರಾಜ್ ರಾಣಿಯಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಅನುಷಾ ರೈ, ಪ್ರಮೋದ್ ಶೆಟ್ಟಿ, ವಜ್ರಧೀರ್ ಜೈನ್, ಸಂದೇಶ್ ಶೆಟ್ಟಿ, ಪ್ರಕಾಶ್ ತುಮ್ಮಿನಾಡು, ರಾಘು ರಾಮನಕೊಪ್ಪ, ಉತ್ಸವ್, ಕಾರ್ತಿಕ್ ರಾವ್, ಸಿರಿಜಾ, ವರ್ಧನ್, ಕರಣ್, ರಾಧಿಕ ರಾವ್ ದಿವ್ಯಶ್ರೀ, ಅಕ್ಷತಾ, ಅರಸು, ಮಹೇಶ್, ನಾಗರಾಜ್ ಮುಂತಾದವರು ತಾರಾಗಣದಲ್ಲಿದ್ದಾರೆ. ಸಂದೇಶ್ ಶೆಟ್ಟಿ ಆಜ್ರಿ ಈ ಚಿತ್ರವನ್ನು ನಿರ್ದೇಶನ ಮಾಡಿದ್ದು, ಜ್ಯೋತಿ ಪ್ರೊಡಕ್ಷನ್ಸ್ ಬ್ಯಾನರಿನಲ್ಲಿ ವಿಕಾಸ್.ಎಸ್. ಶೆಟ್ಟಿ ನಿರ್ಮಾಣ ಮಾಡುತ್ತಿದ್ದಾರೆ.

ಈ ಸಿನಿಮಾದ ವಿಶೇಷ ಎಂದರೆ ಒಂದೇ ಸಿನಿಮಾದಲ್ಲಿ ಎರಡು ಟೈಟಲ್‌ಗಳಿವೆ. ಅದಕ್ಕೆ ಕಾರಣ ಈ ಚಿತ್ರದ ಕಥಾಹಂದರ, ಚಿತ್ರದ ಮೊದಲಾರ್ಧ ಬಾರ್‌ನಲ್ಲಿ ಶುರುವಾಗಿ, ಬಾರ್ ಸುತ್ತ ಸಾಗಿದರೆ, ದ್ವಿತೀಯಾರ್ಧ ದೇವರ ತಾಣದಲ್ಲಿ ಶುರುವಾಗಿ ಅಲ್ಲಿಯೇ ಮುಗಿಯುತ್ತದೆ. ಹಾಗಾಗಿ ಚಿತ್ರದ ಮೊದಲಾರ್ಧ ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಆಗಿದ್ದರೆ, ದ್ವಿತೀಯಾರ್ಧ ದೇವರ ತಾಣ ಎಂದಿದೆ. ಸೆನ್ಸಾರ್ ನಿಯಮದಂತೆ ಒಂದು ಸಿನಿಮಾಕ್ಕೆ ಒಂದೇ ಹೆಸರು ಇಡಬೇಕಾಗಿರುವುದರಿಂದ, ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಹೆಸರಿನಲ್ಲಿ ಸಿನಿಮಾ ಬಿಡುಗಡೆಯಾಗಲಿದೆ ಎನ್ನುತ್ತಾರೆ ನಿರ್ದೇಶಕ ಸಂದೇಶ. ಕುಂದಾಪುರ, ಶಿವಮೊಗ್ಗ, ತೀರ್ಥಹಳ್ಳಿ ಸೇರಿದಂತೆ ಕರಾವಳಿ ಮಲೆನಾಡು ಭಾಗದಲ್ಲಿ ಚಿತ್ರದ ಬಹುತೇಕ ಚಿತ್ರೀಕರಣ ನಡೆಸಲಾಗಿದೆ.

ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಸಿನಿಮಾದ ಕೆಲಸಗಳು ಪೂರ್ಣಗೊಂಡಿದ್ದು, ಆದಷ್ಟು ಬೇಗ ಸಿನಿಮಾವನ್ನು ಪ್ರೇಕ್ಷಕರ ಮುಂದೆ ತರುತ್ತಿದ್ದೇವೆ. ಸದ್ಯ ಸಿನಿಮಾದ ಟೀಸರ್ ಅನ್ನು 60 ಎಂ.ಎಲ್ ಶೀರ್ಷಿಕೆಯಲ್ಲಿ ಬಿಡುಗಡೆ ಮಾಡಿದ್ದೇವೆ. ನಮ್ಮ ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಸಿನಿಮಾ ನಿರ್ದರ್ಶನವಾಗಿ ನಿಲ್ಲುತ್ತದೆ. ಕನ್ನಡ ಚಿತ್ರರಂಗದ ಮಟ್ಟಿಗೆ ಇದೊಂದು ವಿಭಿನ್ನ ಚಿತ್ರವಾಗಿವಾಗಿದೆ.

-ಕಾಸ್.ಎಸ್. ಶೆಟ್ಟಿ ನಿರ್ಮಾಪಕ

ಮಹಾಕಾವ್ಯದ ದೃಶ್ಯ ವೈಭವ



ಮಹಾಕಾವ್ಯ ರಾಮಾಯಣವನ್ನು ಆಧರಿಸಿ ಹಲವು ಸಿನಿಮಾಗಳು ಮೂಡಿಬಂದಿವೆ. ಈಗ ನಿತೇಶ್ ತಿವಾರಿ ನಿರ್ದೇಶನದಲ್ಲಿ ಮೂಡಿಬಂದಿರುವ ರಾಮಾಯಣ ಈ ಹಿಂದಿನ ಎಲ್ಲಾ ಸಿನಿಮಾಗಳಿಗಿಂತ ಅದ್ಭುತವಾಗಿದೆ. ಸಿನಿಮಾರಂಗದಲ್ಲಿ ಹೊಸ ಮೈಲುಗಲ್ಲು ಸೃಷ್ಟಿಸಿದೆ. ರಾಮಾಯಣ ವಿಶ್ವದೆಲ್ಲೆಡೆ ತೆರೆಗೆ ಬಂದಿದ್ದು, ಅಭೂತಪೂರ್ವ ಯಶಸ್ಸು ಪಡೆದಿದೆ. ಬೆಳ್ಳಿಪರದೆಯ ಮೇಲೆ ರಾಮಾಯಣವನ್ನು ನೋಡಿ ಆನಂದಿಸಬಹುದಾಗಿದೆ. ಅದಕ್ಕೂ ಮಿಗಿಲಾಗಿ ತ್ರಿಡಿಯಲ್ಲಿ ರಾಮಾಯಣದ ಪ್ರತಿ ದೃಶ್ಯಗಳನ್ನು ನೋಡುತ್ತಿದ್ದರೆ ಕಣ್ಣ ಮುಂದೆಯೇ ನಡೆಯುತ್ತಿದೆಯೇನೋ ಎಂದೆನಿಸುತ್ತದೆ. ರಣಬೀರ್ ಕಪೂರ್ ರಾಮನಾಗಿ, ಸಾಯಿ ಪಲ್ಲವಿ ಸೀತೆಯಾಗಿ ಅದ್ಭುತವಾಗಿ ನಟಿಸಿದ್ದಾರೆ. ಇಲ್ಲಿ ರಾಮನ ಪಾತ್ರದಂತೆಯೇ ರಾವಣನ ಪಾತ್ರಕ್ಕೂ ಹೆಚ್ಚಿನ ಒತ್ತು ನೀಡಲಾಗಿದೆ.

ರಾಮಾಯಣ ಸಿನಿಮಾದಲ್ಲಿ ರಾವಣನ ಪಾತ್ರವೇ ಹೈಲೈಟ್ ಆಗಿದೆ. ದಶಕಂಠ ರಾವಣನಾಗಿ ಯಶ್ ಅದ್ಭುತವಾಗಿ ನಟಿಸಿದ್ದಾರೆ. ಚಿತ್ರದುದ್ದಕ್ಕೂ ಅವರ ಪಾತ್ರ ಆವರಿಸಿಕೊಂಡಿದೆ. ರಾಕಿಬಾಯಿ ರೌದ್ರಾವತಾರ, ಘರ್ಜನೆ ಸಿನಿಪ್ರಿಯರನ್ನು ಅಕ್ಷರಶಃ ಮಂತ್ರಮುಗ್ಧಗೊಳಿಸಿದೆ. ಲಂಕಾಧಿಪತಿಯ ಗಾಂಭೀರ್ಯಕ್ಕೆ ತಕ್ಕಂತೆ ಯಶ್ ನಟಿಸಿದ್ದು, ತಮಗೆ ನೀಡಿದ ಪಾತ್ರಕ್ಕೆ ಜೀವತುಂಬಿದ್ದಾರೆ. ಯಶ್ ಅಭಿನಯದ ಟಾಕ್ಸಿಕ್ ಚಿತ್ರವನ್ನು ನೋಡಿದ ಕೆಲವರು ಮೂಗು ಮುರಿದಿದ್ದರೆ. ಈಗ ಬೆಳ್ಳಿತೆರೆಯಲ್ಲಿ ರಾಯನನ್ನು ರಾವಣ ಅವತಾರದಲ್ಲಿ ನೋಡಿ ಬಹುಪರಾಕ್ ಎಂದಿದ್ದಾರೆ.



ಇನ್ನು ಸೀತೆಯ ಪಾತ್ರದಲ್ಲಿ ನಟಿ ಸಾಯಿ ಪಲ್ಲವಿ ನಟಿಸುತ್ತಿದ್ದಾರೆ ಎಂದಾಗ ಹಲವರು ಟೀಕೆ ಮಾಡಿದ್ದರು. ಅದಕ್ಕೆ ಸಾಯಿ ಪಲ್ಲವಿ ಅಭಿನಯದ ಮೂಲಕವೇ ಉತ್ತರ ನೀಡಿದ್ದಾರೆ. ಈಗ ಸಿನಿಮಾ ನೋಡಿದ ಎಲ್ಲರೂ ಸಾಯಿ ಪಲ್ಲವಿಯನ್ನು ಮೆಚ್ಚಿ ಕೊಂಡಾಡಿದ್ದಾರೆ. ಸೀತೆಯ ಪಾತ್ರಕ್ಕೆ ಇವರೇ ಸರಿಯಾದ ಆಯ್ಕೆ ಎಂದು ಶ್ಲಾಘಿಸಿದ್ದಾರೆ. ಉಳಿದಂತೆ ಸನ್ನಿ ಡಿಯೋಲ್, ವಿವೇಕ್ ಒಬೆರಾಯ್, ರಾಕುಲ್ ಪ್ರೀತ್ ಸಿಂಗ್ ಪಾತ್ರ ಗಮನ ಸೆಳೆಯುತ್ತವೆ. ಎ.ಆರ್ ರೆಹಮಾನ್ ಹಾಗೂ ಹ್ಯಾನ್ಸ್ ಜಿಮ್ಮರ್ ಹಿನ್ನೆಲೆ ಸಂಗೀತ ಸಿನಿಮಾಗೆ ಹೊಸ ನೀಡಿದೆ.

ಮೂಡಿಬರಲಿದೆ ಮೂರನೇ ಭಾಗ

ರಾಮಾಯಣ ಎರಡು ಭಾಗದಲ್ಲಿ ಮೂಡಿಬರಲಿದೆ ಎಂಬುದು ಈ ಹಿಂದೆಯೇ ತಿಳಿದಿತ್ತು. ನಿರ್ದೇಶಕರು ಅದನ್ನು ಸ್ಪಷ್ಟಪಡಿಸಿದ್ದರು. ಮುಂದಿನ ದೀಪಾವಳಿಗೆ ರಾಮಾಯಣ ಭಾಗ 2 ತೆರೆಗೆ ಬರಲಿದೆ. ಮುಂದಿನ ಭಾಗದಲ್ಲಿ ರಾಮ ರಾವಣರ ರಣ ರೋಚಕ ಕದನ ಪ್ರೇಕ್ಷಕರನ್ನು ಸೆಳೆಯಲಿದೆ. ಅದರಲ್ಲಿಯೂ ಈ ಯುದ್ಧವನ್ನು ತ್ರಿಡಿಯಲ್ಲಿ ಕಣ್ತುಂಬಿಕೊಳ್ಳಲು ಎಲ್ಲರೂ ಕಾತರರಾಗಿದ್ದಾರೆ. ಇನ್ನೂ ವಿಶೇಷ ಎಂದರೆ ರಾಮಾಯಣ ಮೂರನೇ ಭಾಗವೂ ಬರಲಿದೆಯಂತೆ. ಇದು ಸಿನಿಪ್ರಿಯರಲ್ಲಿ ಮತ್ತಷ್ಟು ಕುತೂಹಲ ಮೂಡುವಂತೆ ಮಾಡಿದೆ.

